## ಸಮುದ್ರ ಮಥನ




### ಮಾಹಿತಿಪೂರ್ಣ

'ಧರೆಗಿಳಿದ ಲಕ್ಷುರಿ', ಜಯಸಿಂಹ ಆರ್. ಅವರ ಮುಖಪುಟ ಲೇಖನ (ಸುಧಾ, ಜೂನ್ 1) ಮಾಹಿತಿಪೂರ್ಣವಾಗಿದೆ. ಹೊಸ ಬೈಕ್‌ಗಳ ಬಗ್ಗೆ ವಿವರವಾದ ಮಾಹಿತಿಯನ್ನು ಲೇಖನ ಒಳಗೊಂಡಿದೆ.

—ಹರ್ಷಿತ್ ಮಂಗಳೂರು, ಶೋಭಾ ಮಂಜೇಶ್ವರ, ಮಧುರಾ ಸುಬ್ರಹ್ಮಣ್ಯ ಬೆಂಗಳೂರು

### ಬೆಳಕು ಚೆಲ್ಲಿದೆ

'ನಿಮ್ಮೊಡನೆ'ಯಲ್ಲಿ (ಚ.ಹ. ರಘುನಾಥ್) ನಮ್ಮ ಶಿಕ್ಷಣದ ಅವ್ಯವಸ್ಥೆಯ ಬಗ್ಗೆ ಬೆಳಕು ಚೆಲ್ಲಲಾಗಿದೆ. ಆದರೆ ದಪ್ಪ ಚರ್ಮದ ಸರ್ಕಾರ ನಡೆಸುವವರಿಗೆ ಇದರ ಬಗ್ಗೆ ಕೊಂಚವೂ ಕಾಳಜಿ ಇಲ್ಲ.

—ಶ್ರೀನಾಥ್ ಕೊನೇಟಿ ಬೆಂಗಳೂರು, ಬಿ.ಎಸ್.ಎನ್.ರಾವ್ ಮಂಡ್ಯ, ಮೈ.ಸತೀಶ ಕುಮಾರ, ಬಂಗಾರಪೇಟೆ

### ಚಿಂತನಾರ್ಹ

'ಕಲಿಕೆಯಲ್ಲಿ ಕನ್ನಡ' (ವೇದಾವತಿ ಎಂ.) ಶಿಕ್ಷಣ ಲೇಖನ ಚಿಂತನಾರ್ಹವಾಗಿದೆ. ಕನ್ನಡ ಭಾಷೆಯ ಬಳಕೆಯ ಕುರಿತು ಪ್ರತಿಯೊಬ್ಬ ಕನ್ನಡಿಗರು ಚಿಂತಿಸಿ ಆತ್ಮಾವಲೋಕನ ಮಾಡಿಕೊಳ್ಳುವಂತಿದೆ.

—ಕೆ.ಪಿ. ರಾಮಗುಂಡಿ ಬೈಲಹೊಂಗಲ, ಮಹಾವೀರ ಕಾಸರ ಶಿವಮೊಗ್ಗ

### ಕಡ್ಡಾಯ ಮಾಡಬೇಕು

ಪ್ರಾಥಮಿಕ ಶಾಲೆಯಿಂದಲೇ ಮಾತೃಭಾಷೆಯ ಪದಗಳ ಕಲಿಕೆಗೆ ಸರ್ಕಾರವೂ ಕಡ್ಡಾಯ ಮಾಡಬೇಕಿದೆ.

—ಕೊಮರ್ಲ ಸತ್ಯನಾರಾಯಣ ಬೆಂಗಳೂರು

### ಸೋಜಿಗ

'ಲೇಪಾಕ್ಷಿಯ ಶಿಲ್ಪ ವೈಭವ' (ರಾಜೇಶ್ವರಿ ಜಯಕೃಷ್ಣ) ಓದಿ ಅಚ್ಚರಿಯಾಯಿತು. ಆಂಧ್ರದಲ್ಲೂ ಹಳೆಗನ್ನಡ ಶಾಸನ ಇರುವುದು ಮತ್ತು ಈ ದೇವಾಲಯದಲ್ಲಿ ತೂಗಾಡುವ ಕಂಬ ಇರುವುದು ಸೋಜಿಗವೇ.

—ನಾರಾಯಣಯಾಜಿ ಶಿರಾಲಿ

### ನೆನಪಿನ ಚಿತ್ತಾರ

ಹರಿದ್ವಾರ ನೆನಪಿನ ಚಿತ್ತಾರ ( ನಿರಂಜನ ವಾನಳ್ಳಿ) ಓದಿದಾಗ ಹಿಂದೆ ಈ ಸ್ಥಳಗಳಿಗೆ ಭೇಟಿಯಿತ್ತ ನೆನಪುಗಳು ಮರುಕಳಿಸಿ ಮತ್ತೊಮ್ಮೆ ಈ ಕ್ಷೇತ್ರಗಳಿಗೆ ಪ್ರವಾಸ ಮಾಡುವ ಮನಸ್ಸಾಗಿದೆ.

—ಪ.ಚಂದ್ರಕುಮಾರ ಗೌನಹಳ್ಳಿ

### ಗಂಗೆಗೆ ಏಕೀ ಗತಿ?

ಹರಿದ್ವಾರದಲ್ಲಿ ಹಿಂದೆ ಸ್ವಚ್ಛ ಗಂಗೆಯನ್ನು ನೋಡಿ ಸಂಭ್ರಮಿಸಿದ ನಾನು ಕೋಲ್ಕತ್ತಾದ ಬೇಲೂರು ರಾಮಕೃಷ್ಣ ಮಠದ ಸನಿಹ ಹರಿದು ಹೋಗುತ್ತಿರುವ ಕೆಟ್ಟ ವಾಸನೆಯ ಗಂಗೆಯನ್ನು ನೋಡಿದೆ. ಗಂಗೆಗೆ ಏಕೆ ಈ ಗತಿ ಬಂತು ಎಂಬ ಪ್ರಶ್ನೆಗೆ ಉತ್ತರವೇ ಸಿಗಲಿಲ್ಲ.

—ಕೋಟೇಶ್ವರ ಸೂರ್ಯನಾರಾಯಣರಾವ್

### ಕ್ರೀಡಾ ಲೇಖನ

'ಕ್ರೀಡಾಲೋಕ'ದಲ್ಲಿ 'ಲಂಕನ್ನರ ಭುಜಬಲ' (ವಿಕ್ರಂ ಕಾಂತಿಕೆರೆ) ಲೇಖನ ಚೆನ್ನಾಗಿದೆ.

—ಬಿ.ಎಸ್.ರಮೇಶ್ ಬೆಂಗಳೂರು

### ಕಸದಿಂದ ರಸ

'ಇಲ್ಲಿ ಯಾವುದೂ ವ್ಯರ್ಥವಲ್ಲ' (ಆನಂದತೀರ್ಥ ಪ್ಯಾಟಿ) ಸಮಯೋಚಿತ. ಕಸದಿಂದ ರಸ ಮಾಡುವ ಈ ತಿಳಿವಳಿಕೆ ಆಹಾರವನ್ನು ಪೋಲು ಮಾಡುವವರಲ್ಲೂ ಇದ್ದರೆ ಎಷ್ಟು ಚೆನ್ನ ಅಲ್ಲವೇ?

—ಸುಲೋಚನಾ ವಾದಿರಾಜ್ ಶಿವಮೊಗ್ಗ, ಕೊಹಿಮ ಬಸರಕೋಡು

### ಒಗ್ಗೂಡಿಸುವ ಸಂಬಂಧ

'ಬೆಸುಗೆ ಬಿಡುತ್ತಿರುವ ಸಂಬಂಧಗಳು' (ರಾಜೀವ್ ಎನ್. ಮಾಗಲ್) ಲೇಖನ ಇಂದಿನ ಯುವಕ/ಯುವತಿಯರ ಕಣ್ಣು ತೆರೆಸಿ ಬಿಡಿ ಬಿಡಿಯಾಗುತ್ತಿರುವ ಸಂಬಂಧಗಳನ್ನು ಒಗ್ಗೂಡಿಸಲು ನೆರವಾಗುವಂತಿದೆ.

—ಸುಂದರ್ ಬೆಂಗಳೂರು, ರಾಜಶೇಖರ ಹಾದಿಮನಿ ಧಾರವಾಡ

### ಅಗತ್ಯವೇ?

'ಸೆಲೆಬ್ರಿಟಿ'ಯಲ್ಲಿ 'ರಜನಿ ಮತ್ತು ದೇವರು' (ಹನಿ) ಬರಹ ಸಕಾಲಿಕ. ರಾಜಕೀಯ ಮತ್ತು ರಾಜಕಾರಣದಲ್ಲಿ ಮೌಲ್ಯಗಳು ನಶಿಸುತ್ತಿರುವ ಈ ದಿನಗಳಲ್ಲಿ ರಜನಿಯ ಅವರ ರಾಜಕೀಯ ಪ್ರವೇಶ ಈ ವಯೋಮಾನದಲ್ಲಿ ಅಗತ್ಯವೇ?

—ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ

### ಪಕ್ಕಾ ರಾಜಕಾರಣಿ

ಬೆಂಗಳೂರಿನಲ್ಲಿ ಬಸ್ ಕಂಡಕ್ಟರ್ ಆಗಿದ್ದ, ಆಗಾಗ ಬೆಂಗಳೂರಿಗೆ ಬಂದು ಜನಸಾಮಾನ್ಯರೊಡನೆ ಬೆರೆತು ಹೋಗುತ್ತಿದ್ದ ರಜನಿ ಇಂದು ತಾವು 'ಕನ್ನಡಿಗರಲ್ಲ, ತಮಿಳರು' ಎಂದು ಹೇಳಿಕೊಂಡಿದ್ದಾರೆ. ಕಾವೇರಿ ನೀರಿನ ವಿಷಯದಲ್ಲಿ ಮೌನ ವಹಿಸಿದ್ದ ರಜನಿ ಈಗ ಪಕ್ಕಾ ರಾಜಕಾರಣಿಯಾಗಿದ್ದಾರೆ.

—ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ

### ಮಾರ್ಮಿಕ ಕಥೆ

ಕಥೆ 'ಬಸಿರ ಪೆಟ್ಟಿಗೆಗಳು ಬಾಡಿಗೆಗಿವೆ' (ಗೌರಿ ಚಂದ್ರಕೇಸರಿ) ಮಾರ್ಮಿಕವಾಗಿದೆ.

—ಸುಮಂತ್ ಮಂಗನಹಳ್ಳಿ

### ವಿಭಾ ಸಾಹಿತ್ಯ ಪ್ರಶಸ್ತಿಗೆ ಹಸ್ತಪ್ರತಿ ಆಹ್ವಾನ

ಕನ್ನಡ ಕವಯಿತ್ರಿ ವಿಭಾ ಅವರ ನೆನಪಿನಲ್ಲಿ 'ವಿಭಾ ಸಾಹಿತ್ಯ ಪ್ರಶಸ್ತಿ 2017' ಕ್ಕಾಗಿ ಕನ್ನಡದ ಕವಿ/ಕವಿಯಿತ್ರಿಯರಿಂದ ಮೂವತ್ತಕ್ಕೂ ಹೆಚ್ಚು ಸ್ವರಚಿತ ಕವಿತೆಗಳ ಹಸ್ತಪ್ರತಿಗಳನ್ನು ಆಹ್ವಾನಿಸಲಾಗಿದೆ. ಅನುವಾದಿತ ಕವಿತೆಗಳು ಬೇಡ. ಯಾವುದೇ ಕಾರಣಕ್ಕೂ ಹಸ್ತಪ್ರತಿಯನ್ನು ಹಿಂದಿರುಗಿಸಲಾಗುವುದಿಲ್ಲ. ಮೇಲ್ ಮೂಲಕ ಕಳಿಸುವುದಕ್ಕಿಂತ ಡಿಟಿಪಿ ಮಾಡಿದ ಹಸ್ತಪ್ರತಿ ಕಳಿಸಿಕೊಡಬೇಕು. ಕೊನೆಯ ದಿನ ಜುಲೈ 15. ವಿಳಾಸ: ಪ್ರಕಾಶ ಸುನಂದಾ ಕಡಮೆ, ಸಂಚಾಲಕರು, ವಿಭಾ ಸಾಹಿತ್ಯ ಪ್ರಶಸ್ತಿ 2017, ನಂ. 90, 'ನಾಗಸುಧೆ' ಮಹಡಿ, 6/ಬಿ ಕ್ರಾಸ್, ಕಾಳಿದಾಸನಗರ,  ವಿದ್ಯಾನಗರ ವಿಸ್ತೀರ್ಣ, ಹುಬ್ಬಳ್ಳಿ 58003. ಫೋನ್; 9845779387




ನಂ.1 ವಶೀಕರಣ ಮೋಡಿಗಾರರು



ಪಂಡಿತ್ ಸಾಯಿನಾಥರಾವ್ (ಕುಡ್ಲ)

ಸಮಸ್ಯೆಯನ್ನು ನೋಡಿ ಕರುಣೆ ತೋರಿಸುವುದು ಮನುಷ್ಯತ್ವ ಅದೇ ಸಮಸ್ಯೆಗೆ ಪರಿಹಾರ ನೀಡುವುದು ದೈವತ್ವ.

ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮೋಡಿಗಾರರು

ಎಲ್ಲಾ ಸಮಸ್ಯೆಗಳಿಗೆ ಫೋನಿನ ಮೂಲಕ 100ಕ್ಕೆ 101 ರಷ್ಟು ಪರಿಹಾರ ಶತಸಿದ್ಧ.

ನಿಮ್ಮ ಸಂಕಷ್ಟಗಳಾದ ಉದ್ಯೋಗದಲ್ಲಿ ಅಡೆತಡೆ, ಮಾನಸಿಕ ಅಶಾಂತಿ, ವಾಸ್ತುದೋಷ, ಕುಜದೋಷ, ಮಕ್ಕಳ ಸಮಸ್ಯೆ, ಪ್ರೇಮವಿಚಾರ, ಮನಇಚ್ಛಾ ವಶೀಕರಣ, ಮಾಟಮಂತ್ರ ತಡೆ, ಶತ್ರುಕಾಟ, ರಾಜಕೀಯ, ಕೋರ್ಟ್‌ಕೇಸ್, ಜನವಶ, ಲಕ್ಷ್ಮೀವಶ, ಕಾರ್ಯಸಿದ್ಧಿ, ಇನ್ನಿತರ ನಿಮ್ಮ ಎಷ್ಟೇ ಕಠಿಣ ಸಮಸ್ಯೆಗಳಿಗೂ ಖಚಿತವಾದ ಪರಿಹಾರ. ಚಿಂತಿಸುವ ಅವಶ್ಯಕತೆ ಇಲ್ಲ ಒಂದು ಫೋನ್‌ಕಾಲ್‌ನಿಂದ ನಿಮ್ಮ ಜೀವನ ಬದಲಾಗುತ್ತದೆ. ಇವರು ನಿಮ್ಮ ನಗರದಲ್ಲಿ ಖಾಯಂ ಆಗಿ ನೆಲೆಸಿದ್ದಾರೆ.

ವಿಶೇಷ ಸೂಚನೆ: ಮಾಟಮಂತ್ರ, ವಿದೇಶ ಪ್ರಯಾಣ, ಲೈಂಗಿಕ ಸಮಸ್ಯೆ, ಶತ್ರುಗಳ ನಾಶ, ಹಾಗೂ ಹಲವಾರು, ಸಮಸ್ಯೆಗಳಿಗೆ ಅಷ್ಟದಿಗ್ಬಂಧನ ಶಕ್ತಿ ತಾಂತ್ರಿಕ, ಮಾಂತ್ರಿಕ ಶಕ್ತಿ ಹಾಗೂ ಸರ್ವ ದೈವಶಕ್ತಿಗಳ ಮೂಲಕ

ಕೇವಲ 5 ದಿನಗಳಲ್ಲಿ ಪರಿಹಾರ ಶತಸಿದ್ಧ

ನೀವು ಇಷ್ಟಪಟ್ಟವರು ನಿಮ್ಮಂತೆ ಆಗಲು ಯಾರಿಂದಲೂ ಆಗದ ಕೆಲಸ ಕೆಲವೇ ಗಂಟೆಗಳಲ್ಲಿ ಸಾದ್ಯ. ಗುಪ್ತ ನಿಗೂಢ ಸಮಸ್ಯೆಗಳೇನೆ ಇರಲಿ ತಕ್ಷಣದಲ್ಲಿ ಪರಿಹಾರ ಸೂಚಿಸುತ್ತಾರೆ.

ಸ್ತ್ರೀ ಪುರುಷ ವಶೀಕರಣಕ್ಕೆ ಮದನಸಮ್ಮೋಹಿನಿ ಯಂತ್ರ ಮಾಡಿಕೊಡಲಾಗುವುದು.

ಶ್ರೀ ಶಕ್ತಿಮಹಾಗಣಪತಿ ಜ್ಯೋತಿಷ್ಯಾಲಯ

ಖಾಯಂ ವಿಳಾಸ: 16ನೇ ಕ್ರಾಸ್, ಸಿದ್ಧಾಶ್ರಮ ಪಕ್ಕ, ಬ್ರಾಹ್ಮಣ ಕಾಫಿಬಾರ್ (ಅಡಿಗಾಸ್ ಹೋಟೆಲ್) ಪಕ್ಕ, ಬಡಗನಾಡು ಭವನದ ಎದುರು, ಸಂಪಿಗೆರಸ್ತೆ, ಮಲ್ಲೇಶ್ವರಂ, ಬೆಂಗಳೂರು

9972555709